ಹಸ್ತ ಕಲಾಕೃತಗಳು

ವಿಭಾಗ 1 – ಚಾಂಪಿಯನ್ಸ್

ಸಂಡೇ ಸ್ಕೂಲ್
ಚಾಂಪಿಯನ್ಸ್
ಆತ್ಮ ಫಲದ ಚಾಂಪಿಯನ್ಸ್ ಗಲಾತ್ಯ. 5:22–23

ಪ್ರೀತಿಯ ಹೃದಯ

ಅಗತ್ಯಗಳು:

- ಎರಡು ಕಡೆ ಹೃದಯದ ಆಕಾರಗಳು ಮುದ್ರವಾಗಿರುವ ಕಾಗದ ಅಥವಾ ಕಾರ್ಡ್‌ಬೋರ್ಡ್ (ಪ್ರತಿ ಮಗುವಿಗೆ – 1 ಹೃದಯದ ವೃತ್ತ)
- ಗುಂಗುರು ರಿಬ್ಬನ್ (ಪ್ರತಿ ಮಗುವಿಗೆ 1)
- ಅಯ್ಕೆಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಅಥವಾ ಒಳ್ಳೆಯ ಸ್ಕೆಟ್ಚ್ ಪೆನ್‌ಗಳು

ಸೂಚನೆಗಳು:

1. ವೃತ್ತಾಕರವನ್ನು ಕತ್ತರಿಸಿರಿ. ಪಂಚ್ ಹೋಲ್ ಮುಕಾಂತರ ವೃತ್ತಾಕರದ ಸುತ್ತಲು ರಂದ್ರಗಳನ್ನು ಹಾಕಿರಿ.
2. ಎರಡು ಕಡೆ ಹೃದಯದ ಆಕಾರಗಳಿಗೆ ಬಣ್ಣ ಹಚ್ಚಿರಿ.
3. ರಂದ್ರಗಳೊಳಗಿಂದ ರಿಬ್ಬನ್ ಹಾಕಿ ಮತ್ತು ಒಂದು ಬೋ ಮಾಡಿರಿ.



20307
Crafts Champions 1

ಜಾಯ್ ಶೇಕರ್

ಅಗತ್ಯಗಳು:
- ಚಿಕ್ಕ ಪ್ಲಾಸ್ಟಿಕ್ ಕಪ್ಪುಗಳು (ಪ್ರತಿ ಮಗುವಿಗೆ 2)
- ಒಂದು ಚೆಮಚ ಬಣ್ಣದ ಅಕ್ಕಿ, ಸೆಕ್ವೆನ್ಸ್‌ಗಳು ಅಥವಾ ಮರಳು
- ಬೈಬಿಲ್ ವಚನ ಯಿರುವ ಜಾಯ್ ಸ್ಟಿಕ್ಕರ್ ಕಾಗದ ಅಥವಾ ಬೈಬಿಲ್ ವಚನ ಯಿರುವ ಸಾಧಾರಣ ಕಾಗದ ಮತ್ತು ಅಂಟು (ಗ್ಲೂ).

ಸೂಚನೆಗಳು:
1. ಒಂದು ಚೆಮಚ ಅಕ್ಕಿಯನ್ನು ಒಂದು ಕಪ್ಪಲ್ಲಿ ಹಾಕಿರಿ.
2. ಮೊದಲನೆಯ ಕಪ್ಪಿನ ಮೇಲೆ ಕಾಲಿ ಕಪ್ಪನ್ನು ಉಲ್ಟ ಮಾಡಿ ಶೇಕರನ್ನು ಮುಚ್ಚುವಂತೆ ಹಾಕಿರಿ.
3. ಸ್ನೇಹಿತರೋಂದಿಗೆ ಕೆಲಸ ಮಾಡುತ್ತ, ಕಪ್ಪುಗಳನ್ನು ಜೊತೆಯಾಗಿ ಹಿಡಿದು ಮತ್ತು ಮಧ್ಯ ಭಾಗದಲ್ಲಿ ಸ್ಟಿಕ್ಕರನ್ನು ಅಂಟಿಸಿ ಮತ್ತು ಕಪ್ಪುಗಳನ್ನು ಬದ್ರವಾಗಿ ಜೋತೆಗೂಡಿಸಿ. ಸ್ಟಿಕ್ಕರಲ್ಲದೇ ಸಾದಾರಣವಾದ ಕಾಗದ ವಾದರೆ, ಸುಮ್ಮನೆ ಕಾಗದವನ್ನು ಕಪ್ಪುಗಳ ಸುತ್ತಲು ಸುತ್ತಿ ಎರಡು ಕೊನೆ ಭಾಗಗಳನ್ನು ಜೋತೆಯಾಗಿ ಅಂಟಿಸಿ.

ಆಯ್ಕೆಗಳು: ಶೇಕರ್‌ಗಳನ್ನು ಲಯ ವಾದ್ಯಗಳಾಗಿ ಉಪಯೋಗಿಸಿ ಒಂದು ಹಾಡನ್ನು ಹಾಡಿರಿ. ಸರಿಯಾದ ಸಮಯದ ವರೆಗೆ ಅದನ್ನು ನಿಶಬ್ಧವಾಗಿ ಹಿಡಿದಿರುವುದನ್ನು ವಿದ್ಯಾರ್ಥಿಗಳಿಗೆ ಬೋಧಿಸಿರಿ.

ಬಣ್ಣದ ಅಕ್ಕಿ:
ಬೇಯಸದಿರುವ 1 ಕಪ್ಪು ಅಕ್ಕಿಯಲ್ಲಿ, 2–3 ಚುಕ್ಕೆಗಳ ಫುಡ್ ಕಲರ್ ಹಾಕಿರಿ ಮತ್ತು 1 ಅಥವಾ 2 ಉಜ್ಜುವ ಮದ್ಯಸಾರವನ್ನು ಹಾಕಿ ಅಕ್ಕಿಯೆಲ್ಲವು ಬಣ್ಣವಾಗುವವರೆಗು ಚೆನ್ನಾಗಿ ಕಲಿಸಿರಿ. ಅಕ್ಕಿಯನ್ನು ಒಂದು ಟವಲ್ ಮೇಲೆ ಹಾಕಿ ಮತ್ತು ಪೂರ್ತಿಯಾಗಿ ಒಣಗಿಸಿರಿ.



ಪೂರ್ತಿ ಬಣ್ಣ ಮತ್ತು ಕಡಿಮೆ ಬಣ್ಣಗಳ ಮಾದರಿಗಳನ್ನು ಅಯ್ಕೆ ಮಾಡಿಕೊಳ್ಳಿರಿ.

ಸಮಾದಾನದ ಪಾರಿವಳ

ಅಗತ್ಯಗಳು:
- ಪಾರಿವಳದ ದೇಹ (ಪ್ರತಿ ಮಗುವಿಗೆ 1)
- ರೆಕ್ಕೆಗಳ ನಮೂನೆ (ಪ್ರತಿ ಮಗುವಿಗೆ 1)
- ಗುಂಗುರವಾದ ರಿಬ್ಬನ್ (ಪ್ರತಿ ಮಗುವಿಗೆ 1)
- ಚಲಿಸುತ್ತಿರುವ ಕಣ್ಣು (ಪ್ರತಿ ಮಗುವಿಗೆ 1)

ಆಯ್ಕೆಗಳು: ಕ್ರೆಯಾನ್ಸ್, ಮಾರ್ಕರ್‌ಗಳು, ಅಥವಾ ಬಣ್ಣದ ಪೆನ್ಸಿಲ್‌ಗಳು

ಸೂಚನೆಗಳು:
1. ಪಾರಿವಳದ ದೇಹ ಮತ್ತು ರೆಕ್ಕೆಗಳನ್ನು ಕತ್ತರಿಸಿ ಮತ್ತು ಬಣ್ಣ ಹಚ್ಚಿರಿ. ಸ್ಲಾತ್ಗಳನ್ನು ಕತ್ತರಿಸಲು ಮರೆಯಬೇಡಿರಿ. ದೇಹದಲ್ಲಿ ರಂದ್ರ ಮತ್ತು ರೆಕ್ಕೆಗಳಲ್ಲಿ ಎರಡು ರಂದ್ರಗಳನ್ನು ಹಾಕಲು ಹೋಲ್–ಪಂಚನ್ನು ಉಪಯೋಗಿಸಿರಿ. ದೇಹದ ಹಿಂಭಾಗದಲ್ಲಿ ನಿಮ್ಮ ಹೆಸರುಗಳನ್ನು ಬರೆಯಿರಿ.
2. ಚಲಿಸುತ್ತಿರುವ ಕಣ್ಣನ್ನು (ವಿಗ್ಲಿ ಐಸ್) ದೇಹದ ಮುಂಭಾಗದಲ್ಲಿ ಅಂಟಿಸಿರಿ.
3. ದೇಹದ ಸ್ಲಾಟಿನೊಳಗೆ ರೆಕ್ಕೆಗಳ ಮೇಲಿರುವ ಸ್ಲಾಟನ್ನು ಸೇರಿಸಿರಿ. ಆಯ್ಕೆಗಳು: ರೆಕ್ಕೆಗಳನ್ನು ಅದರ ಸ್ಥಾನದಲ್ಲಿ ಅಂಟಿಸಿ.
4. ಗುಂಗುರವಾದ ರಿಬ್ಬನನ್ನು ಒಂದು ರೆಕ್ಕೆಯ ರಂದ್ರದಿಂದ, ದೇಹದ ರಂದ್ರದಿಂದ, ಮತ್ತೊಂದು ರೆಕ್ಕೆಯ ರಂದ್ರದೊಳಗೆ ಹಾಕಿರಿ. ರಿಬ್ಬನ್ ಕೊನೆ ಭಾಗಗಳನ್ನು ಸೇರಿಸಿ ಲೂಪ್ ಆಗುವ ಹಾಗೆ ಗಂಟುಹಾಕಿರಿ.